ಇಂಗ್ಲಿಷ್ ಮೂಲ: ರೋಆಲ್ಡ್ ದಾಹ್ಲ್
ಕನ್ನಡಕ್ಕೆ: ಜೆ.ವಿ. ಕಾರ್ಲೊ

# ಕರ್ನಲ್ ಸಾಹೇಬರ ಕೋಟು

ಮಿಸ್ಟರ್ ಮತ್ತು ಮಿಸೆಸ್ ಬ್ರಿಗ್ಸ್ ನ್ಯೂಯಾರ್ಕಿನ ಒಂದು ಸಣ್ಣ ಅಪಾರ್ಟ್‌ಮೆಂಟಿನಲ್ಲಿ ವಾಸಿಸುತ್ತಿದ್ದರು. ಸಿರಿಲ್ ಬ್ರಿಗ್ಸ್ ವೃತ್ತಿಯಲ್ಲಿ ದಂತ ವೈದ್ಯನಾಗಿದ್ದರೂ ಅವನ ಗಳಿಕೆ ಹೇಳಿಕೊಳ್ಳುವಂತಿರಲಿಲ್ಲ. ಕೊಂಚ ಚಂಚಲ ಸ್ವಭಾವದ ಮಿಸೆಸ್ ಬ್ರಿಗ್ಸ್ ಆಕರ್ಷಕಳಾಗಿ ಕಾಣಿಸುತ್ತಿದ್ದಳು. ಪ್ರತಿ ತಿಂಗಳು, ಅದರಲ್ಲೂ ಮೊದಲ ಶುಕ್ರವಾರದ ಮಧ್ಯಾಹ್ನದ ಹೊತ್ತಿಗೆ ಮಿಸೆಸ್ ಬ್ರಿಗ್ಸ್ ಪೆನ್ಸಿಲ್ವೇನಿಯಾದಿಂದ ರೈಲು ಹತ್ತಿ ಬಾಲ್ಟಿಮೋರಿನಲ್ಲಿರುವ ತನ್ನ ವಯಸ್ಸಾದ ಚಿಕ್ಕಮ್ಮನನ್ನು ನೋಡಿಕೊಂಡು ಬರಲು ಹೊರಡುತ್ತಿದ್ದಳು. ಅಂದು ರಾತ್ರಿ ಚಿಕ್ಕಮ್ಮನೊಡನೆ ಕಳೆದು, ಶನಿವಾರ ರಾತ್ರಿ ಊಟದ ಮೊದಲು ನ್ಯೂಯಾರ್ಕಿಗೆ ವಾಪಸ್ಸಾಗುತ್ತಿದ್ದಳು.

ಇದರ ಬಗ್ಗೆ ಮಿಸ್ಟರ್ ಬ್ರಿಗ್ಸನಿಗೆ ಯಾವುದೇ ತಕರಾರುಗಳಿರಲಿಲ್ಲ. ತನ್ನ ಹೆಂಡತಿಯ ಚಿಕ್ಕಮ್ಮ ಬಾಲ್ಟಿಮೋರಿನಲ್ಲಿ ವಾಸಿಸುತ್ತಿದ್ದಾರೆ, ಆಕೆಗೆ ವಯಸ್ಸಾಗಿದೆ ಮತ್ತು ಆಕೆಯನ್ನು ತನ್ನ ಹೆಂಡತಿ ತುಂಬಾ ಪ್ರೀತಿಸುತ್ತಿದ್ದಾಳೆಂದು ಅವನಿಗೆ ಗೊತ್ತಿತ್ತು.

"ನೀನು ಹೋಗಿ ಬಾ ಡಿಯರ್. ಆದರೆ, ನಾನೂ ಬರಬೇಕು ಎಂದು ಮಾತ್ರ ಹಟ ಹಿಡಿಯಬೇಡ!" ಎಂದು ಅವನು ಮೊದಲೇ ಹೇಳಿದ್ದ.

"ಇಲ್ಲ ಡಾರ್ಲಿಂಗ್. ನಿನ್ನನೆಂದೂ ಕೇಳುವುದಿಲ್ಲ." ಅವಳೆಂದಿದ್ದಳು.

ಹೀಗೆ, ಇದು ಬಹಳ ಸಮಯದಿಂದ ನಡೆದುಕೊಂಡು ಬಂದಿತ್ತು.

ನಿಜ ಸಂಗತಿ ಏನೆಂದರೆ, ಮಿಸೆಸ್ ಬ್ರಿಗ್ಸಳ ಚಿಕ್ಕಮ್ಮ ಒಂದು ನೆಪವಾಗಿದ್ದಳಷ್ಟೇ. ಖರೆ ಸಂಗತಿ ಏನೆಂದರೆ, ಮಿಸೆಸ್ ಬ್ರಿಗ್ಸ್ ತನ್ನ ಬಹುಕಾಲದ ಇನಿಯನಾಗಿದ್ದ ಕರ್ನಲ್ ಸಾಹೇಬನನ್ನು ನೋಡಲು ಬಾಲ್ಟಿಮೋರಿಗೆ ಹೋಗುತ್ತಿದ್ದಳು. ಮಿಸೆಸ್ ಬ್ರಿಗ್ಸ್ ಶುಕ್ರವಾರ ಸಂಜೆಯಿಂದ ಶನಿವಾರ ಮಧ್ಯಾಹ್ನದ ವರೆಗೆ ಕರ್ನಲ್ ಸಾಹೇಬನೊಂದಿಗಿರುತ್ತಿದ್ದಳು. ಕರ್ನಲ್ ಸಾಹೇಬನೂ ಅಂತಿಂಥವನಲ್ಲ. ದುಡ್ಡಿನ ಕುಳ. ಊರ ಹೊರಗೆ ಅವನಿಗೆ ಅರಮನೆಯಂತಹ ಬಂಗಲೆ ಇತ್ತು. ಹೆಂಡತಿ ಮಕ್ಕಳೆಂಬ ಯಾವುದೇ ಅಡ್ಡಿ ಆತಂಕಗಳಿರಲಿಲ್ಲ. ನರಿಗಳನ್ನು ಶಿಕಾರಿ ಮಾಡುತ್ತಲೋ, ಕುದುರೆ ಸವಾರಿ ಮಾಡುತ್ತಲೋ ಕಾಡುಮೇಡು ಅಲೆಯುತ್ತಿದ್ದ. ವರ್ಷಗಳು ಕಳೆದು ಹೋಗುತ್ತಿದ್ದರೂ ಕರ್ನಲ್ ಸಾಹೇಬ ಮತ್ತು